ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	922
2)	ಮಾನ್ಯ ಸದಸ್ಯರ ಹೆಸರು	ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು)
3)	ಉತ್ತರಿಸಬೇಕಾದ ದಿನಾಂಕ	28-09-2020
4)	ಉತ್ತರಿಸುವವರು	ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

ಪ್ರಶ್ನೆ	ಉತ್ತರ
(ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಕಾರ್ಮಿಕ ಇಲಾಖೆಯ ವತಿಯಿಂದ ಕೌಶಲ್ಯ ತರಬೇತಿ ಶಿಬಿರಗಳನ್ನು ಮತ್ತು ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿತ್ತು; (ಸಂಪೂರ್ಣ ಮಾಹಿತಿ ನೀಡುವುದು)	**ಕೌಶಲ್ಯ ಮಿಷನ್:** ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯ ಯಾವುದೇ ಸ್ಥಳಗಳಲ್ಲಿ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಕೌಶಲ್ಯ ತರಬೇತಿ ಶಿಬಿರಗಳನ್ನು ಮತ್ತು ಉದ್ಯೋಗ ಮೇಳಗಳನ್ನು ಆಯೋಜಿಸಿರುವುದಿಲ್ಲ. ಅದರಂತೆ 2019-20 ನೇ ಸಾಲಿನಲ್ಲಿ ಉದ್ಯೋಗ ಮೇಳವನ್ನು ಗುಲ್ಬರ್ಗಾ-ಬೀದರ್-ಯಾದಗಿರಿ ಜಿಲ್ಲೆಗಳನ್ನು ಒಳಗೊಂಡಂತೆ ನಡೆಸಲು ಯೋಜಿಸಲಾಗಿತ್ತು. ಆದರೆ ಫೆಬ್ರವರಿ 2020 ರಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ಗುಲ್ಬರ್ಗಾ ಜಿಲ್ಲೆಯಲ್ಲಿ ಆಯೋಜನೆವಾಗಿದ್ದರಿಂದ ಸದರಿ ಉದ್ಯೋಗ ಮೇಳವನ್ನು ಮಾರ್ಚ್ 2020 ರ ಮಾಹೆಯಲ್ಲಿ ಆಯೋಜಿಸಲು ತೀರ್ಮಾನಿಸಲಾಗಿತ್ತು. ತದನಂತರದ ಅವಧಿಯಲ್ಲಿ ಕೋವಿಡ್ – 19ರ ಸೋಂಕು ಹರಡುವಿಕೆಯಿಂದಾಗಿ ಉದ್ಯೋಗಮೇಳವನ್ನು ಆಯೋಜಿಸಲಾಗಿರುವುದಿಲ್ಲ.
(ಆ) ಈ ಶಿಬಿರಗಳಲ್ಲಿ ಮತ್ತು ಇಲ್ಲಿ ನಡೆಸಲಾದ ಉದ್ಯೋಗ ಮೇಳದಲ್ಲಿ ಎಷ್ಟು ಜನ ಅಭ್ಯರ್ಥಿಗಳು ಭಾಗವಹಿಸಿದ್ದರು; ಈ ಪೈಕಿ ಎಷ್ಟು ಉದ್ಯೋಗಾವಕಾಶ ದೊರಕಿಸಲಾಗಿದೆ ? (ವಿವರ ನೀಡುವುದು)	ಅನ್ವಯಿಸುವುದಿಲ್ಲ.

ಸಂಖ್ಯೆ: ಕೌಉಜೀಇ 47 ಉಜೀಪ್ರ 2020

(ಡಾ|| ಸಿ.ಎನ್. ಅಶ್ವಥ್‌ನಾರಾಯಣ)
ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ,
ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.